**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 6566/2024 ಸಿ.ಡಬ್ಲೂ.10 ಪಿ.ಡಬ್ಲೂ.7

| | |
|---|---|
| ಹೆಸರು | ಶಿವಶರಣಪ್ಪ |
| ತಂದೆ/ಗಂಡ | ಶಿವರಾಮ |
| ವಯಸ್ಸು | 53 ವರ್ಷ |
| ಉದ್ಯೋಗ | ಎ ಎಸ್ ಐ ಮಾದನ ಹಿಪ್ಪರಗ |
| ವಾಸಸ್ಥಳ | ಮಾದನ ಹಿಪ್ಪರಗ |

ದಿನಾಂಕ 12-02-2026
ಸತ್ಯ ಪ್ರತಿಜ್ಞೆಯ ಮೇರೆಗೆ

se

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ನಾನು ದಿಃ 21.08.2024 ರಿಂದ ಇಲ್ಲಿಯ ರವರೆಗೆ ಮಾದನ ಹಿಪ್ಪರಗ ಪೋಲಿಸ್ ಠಾಣೆಯಲ್ಲಿ ಎ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 05-09-2024 ರಂದು ಚಾಸ-9 ರವರ ಕಡೆಯಿಂದ ಕಡತವನ್ನು ಪಡೆದುಕೊಂಡು ತನಿಖೆ ಕೈಗೊಂಡು ಅದೇ ದಿನ ಚಾಸಾ 2 ಮತ್ತು 3 ರವರ ಸಮಕ್ಷಮ ಚಾಸ-1ರವರು ತೋರಿಸಿದ ಗುನ್ನ ಸ್ಥಳದ ಪಂಚನಾಮೆಯನ್ನು 05.00 ರಿಂದ 6.00 ಗಂಟೆಯವರೆಗೆ ಜರುಗಿಸಿರುತ್ತೇನೆ. ಅದೇ ದಿನ ಚಾಸ-4 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸ-8ರವರ ಕಡೆಯಿಂದ ಕಲಂ 63(4) ಬಿ ಎಸ್ ಎ ಅಡಿಯಲ್ಲಿ ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತೇನೆ. ದಿಃ 07-09-2024 ರಂದು ಆರೋಪಿತರಿಗೆ ಕಲಂ 35 ಬಿ ಎನ್ ಎಸ್ ಎಸ್ ಅಡಿಯಲ್ಲಿ ನೋಟಿಸ್ ನೀಡಿರುತ್ತೇನೆ. ದಿಃ 03.10.2024 ರಂದು ಚಾಸ-1ರವರ ಗಾಯದ ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ತನಿಖೆ ಪೂರ್ಣಗೊಂಡ ಕಾರಣ ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ-3ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-1ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಮತ್ತು ಅದರಲ್ಲಿರುವ

ಸಾಕ್ಷಿಯ ಸಹಿಯನ್ನು 4ಎ ಎಂದು ಗುರುತಿಸಲಾಯಿತು. ಕಲಂ 63(4) ಅಡಿಯಲ್ಲಿ ಸಲ್ಲಿಸಿದ ಪ್ರಮಾಣಪತ್ರವನ್ನು ನಿಪಿ-5 ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು 5ಎ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ **ಶ್ರೀ. ಎಸ್ ಎಸ್ ಸಿ** ವಕೀಲರಿಂದ:</u>

ಸಾಮನ್ಯವಾಗಿ ಎಮ್ ಎಲ್ ಸಿ ಮಾಹಿತಿ ಬಂದ ಮೇಲೆ ನಮ್ಮ ಸಿಬ್ಬಂದಿಯವರು ಆಸ್ಪತ್ರೆಗೆ ಹೋಗಿ ಗಾಯಳುವಿನ ಹೇಳಿಕೆಯನ್ನು ಕೈ ಬರಹದಲ್ಲಿ ಬರೆದುಕೊಂಡು ಬಂದು ಠಾಣಾಧಿಕಾರಿಯ ಮುಂದೆ ಹಾಜರು ಮಾಡುತ್ತಾರೆ ಎಂದರೆ ಸರಿ. ನಾನು ತನಿಖೆ ಮಾಡುವ ಸಂದರ್ಭದಲ್ಲಿ ದೂರು ಕೈ ಬರಹದಲ್ಲಿ ಇರುತ್ತದೆಯೋ ಅಥವಾ ಗಣಕಯಂತ್ರದಲ್ಲಿ ತಯಾರಿಸಿದ್ದು ಇರುತ್ತದೆ ಎಂದು ನೋಡಿಲ್ಲ ಎಂದರೆ ಸರಿ. ಸಾಮನ್ಯ ವಾಗಿ ಎಮ್ ಎಲ್ ಸಿ ಪ್ರಕರಣದಲ್ಲಿ ಗಾಯಳುವಿನ ಹೇಳಿಕೆ ಪಡೆಯವ ಸಂದರ್ಬದಲ್ಲಿ ಸಮಯವನ್ನು ನಮೂದು ಮಾಡಿರುತ್ತಾರೆ ಎಂದರೆ ಸರಿ. ದೂರಿನಲ್ಲಿ ಯಾವ ಸಮಯದಲ್ಲಿ ಚಾಸ-1ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತಿರಾ ಎಂದು ನಮೂದು ಇಲ್ಲ ಎಂದರೆ ಸರಿ. ಪಂಚನಾಮೆಯನ್ನು ಮಾಡಲು ನನೊಬ್ಬನೇ ಹೋಗಿರುತ್ತೇನೆ. ನಾನು ಘಟನಾ ಸ್ಥಳಕ್ಕೆ ಹೋಗುವ ಮುಂಚೆ ಚಾಸ-1ರವರು ಪಂಚರನ್ನು ಕರೆಸಿದ್ದರು ಎಂದರೆ ಸರಿ. ಪಂಚನಾಮೆಯ ಮಾಡುವ ಸಂದರ್ಭದಲ್ಲಿ ನಾನು ಚಾಸ-2 ಮತ್ತು 3ರವರಿಗೆ ಚಾಸ-1ರವರೊಂದಿಗೆ ಯಾವ ರೀತಿಯ ಸಂಬಂದ ಇರುತ್ತದೆ ಎಂದು ವಿಚಾರಣೆ ಮಾಡಿರುತ್ತೇನೆ ಸಾಕ್ಷಿಯು ಮುಂದುವರೆದು ಅವರು ಚಾಸ-1ರವರ ಸಂಬಂದಿಕರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಪಂಚನಾಮೆಯ ಕಾಲಕ್ಕೆ ನಾನು ಚಾಸ-1ರಿಂದ 3 ಇದ್ದೇವು ದೂರದಲ್ಲಿ ಬಹಳ ಜನರು ಇದ್ದರು ಎಂದು ನುಡಿಯುತ್ತಾರೆ. ನಿಪಿ-1ನ್ನು ಚಾಸ-8 ರವರು ತೆಗೆದಿರುತ್ತಾರೆ. ಚಾಸ-8 ರವರು ನಿಪಿ-1ನ್ನು ಅವರ ಮೊಬೈಲ್ ನಿಂದ ತೆಗೆದಿರುತ್ತಾರೆ. ನಿಪಿ-1ರಲ್ಲಿ ಅದನ್ನು ಯಾವ ಸಮಯದಲ್ಲಿ ಮತ್ತು ಎಲ್ಲಿ ತೆಗೆದಿರುತ್ತಾರೆ ಎಂದು ನಮೂದು ಇಲ್ಲ ಎಂದರೆ ಸರಿ ಚಾಸ-4ರವರು ತಮ್ಮ ಸಾಕ್ಷಿಯಲ್ಲಿ ಅವರ ಸೀರೆ ಮತ್ತು ಬ್ಲೌಸ್ ಹರಿದಿತ್ತು ಎಂದು ಹೇಳಿದ್ದು ಸದರಿ ಸೀರೆ ಮತ್ತ ಬ್ಲೌಸ್ ನ್ನು ನಾನು ಜಪ್ತಿ ಪಡಿಸಿಕೊಂಡಿರುವುದಿಲ್ಲ. ನಾನು ಚಾಸ-4 ರಿಂದ 7ರವರ ಹೇಳಿಕೆಗಳನ್ನು ಪಡೆಯುವಾಗ ಸಮಯ 03.00 ರಿಂದ 04.00 ಗಂಟೆ ಆಗಿತ್ತು ಸದರಿ ಹೇಳಿಕೆಗಳನ್ನು ನಾನು ಲಿಖಿತವಾಗಿ ತೆಗೆದುಕೊಂಡಿರುತ್ತೇನೆ. ನಿಪಿ-5ರಲ್ಲಿ ಗುನ್ನ ಸಂಖ್ಯೆ ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ-5ರಲ್ಲಿ ನಿಪಿ-1ನ್ನು ಹ್ಯಾಂಡಿ ಕ್ಯಾಮ್ ದಿಂದ ತೆಗೆದಿರುತ್ತಾರೆ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿಪಿ-5ರಲ್ಲಿ ಕೇವಲ ಎ ಭಾಗ ಇದ್ದು ಬಿ ಇರುವುದಿಲ್ಲ ಎಂದರೆ ಸರಿ. ನಾನು ಆರೋಪಿತರು ತಪ್ಪು ಮಾಡಿಲ್ಲ ಎಂದು ಕಂಡುಬಂದರು ಸಹಿತ ಅವರ ವಿರುದ್ಧ ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ವರದಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 05-09-2024 ರಂದು ಚಾಸ-9 ರವರ ಕಡೆಯಿಂದ ಕಡತವನ್ನು ಪಡೆದುಕೊಂಡು ತನಿಖೆ ಕೈಗೊಂಡು ಅದೇ ದಿನ ಚಾಸಾ 2 ಮತ್ತು 3 ರವರ ಸಮಕ್ಷಮ ಚಾಸ-1ರವರು ತೋರಿಸಿದ ಗುನ್ನ ಸ್ಥಳದ ಪಂಚನಾಮೆಯನ್ನು 05.00 ರಿಂದ 6.00 ಗಂಟೆಯವರೆಗೆ ಜರುಗಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಚಾಸ-4 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಚಾಸ-8ರವರ ಕಡೆಯಿಂದ ಕಲಂ 63(4) ಬಿ ಎಸ್

ಎ ಅಡಿಯಲ್ಲಿ ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 07-09-2024 ರಂದು ಆರೋಪಿತರಿಗೆ ಕಲಂ 35 ಬಿ ಎನ್ ಎಸ್ ಎಸ್ ಅಡಿಯಲ್ಲಿ ನೋಟಿಸ್ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 03.10.2024 ರಂದು ಚಾಸ-1ರವರ ಗಾಯದ ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ತನಿಖೆ ಪೂರ್ಣಗೊಂಡ ಕಾರಣ ಆರೋಪಿತರ ವಿರುದ್ದ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ  ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಅಪರ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ